ಹತ್ತಾರು ತಪಾಸಣೆಗಳ ನಂತರ ಡಾಕ್ಟರ್ ಕಡೆಗೂ ಸದಾನಂದನಿಗೆ ಒಂದು ತೀರ್ಪು ಕೊಟ್ಟರು:

'ಇದು ಮಾರಣಾಂತಿಕ ಕಾಯಿಲೆ!'

ಡಾಕ್ಟರರ ಏಕಾಏಕಿ ಹೇಳಿಕೆಯಿಂದ ಸದಾನಂದ ಒಂದುಸಲ ಕಕ್ಕಾಬಿಕ್ಕಿಯಾದ. ಏನಾಗಿದೆಯೆಂದು ತಿಳಿಯದೆ, ಸ್ವಲ್ಪ ಆತಂಕದಿಂದಲೇ ಕೇಳಿದ:

'ಮಾರಣಾಂತಿಕವೆಂದರೆ?...'

ಅವನ ಪ್ರಶ್ನೆಗೆ ಸಂಬಂಧವಿಲ್ಲದವರಂತೆ ಕೂತಿದ್ದ ಡಾಕ್ಟರ್, ತಾವು ನೋಡಿ ಮುಗಿಸಿದ್ದ ರಿಪೋರ್ಟನ್ನು ನಿರ್ಭಾವುಕರಾಗಿ ದೂಡುತ್ತಾ ಅವನನ್ನೊಮ್ಮೆ ಅನ್ಯಮನಸ್ಕರಾಗಿ ನಿಟ್ಟಿಸಿ, 'ತುಂಬಾ ತಡವಾಗಿ ಬಂದಿದ್ದೀರಿ. ಈಗಾಗಲೇ ಸಾಕಷ್ಟು ಅಡ್ವಾನ್ಸ್ ಸ್ಟೇಜಿನಲ್ಲಿರುವುದರಿಂದ ನಿಮ್ಮ ಸಮಸ್ಯೆ ತುಂಬಾ ಕಾಂಪ್ಲಿಕೇಟೆಡ್. ಸದ್ಯಕ್ಕೆ ಏನೂ ಹೇಳಲಾಗುತ್ತಿಲ್ಲ!' ಅಂದರು.

ಒಂದು ಕ್ಷಣ ಸದಾನಂದ ಗಲಿಬಿಲಿಗೊಂಡ. ಎಲ್ಲವೂ ಅಯೋಮಯವೆನ್ನಿಸಿ, ದೀರ್ಘ ಶ್ವಾಸವೆಳೆದುಕೊಂಡು ಮೆಲ್ಲಗೆ ಕೇಳಿದ: 'ಇನ್ಶೂರೆನ್ಸ್ ಕವರೇಜ್ ಇದೆ. ಹೌ ಮಚ್ ಡಸ್ ಇಟ್ ಕಾಸ್ಟ್? ವೆನ್ ಶುಡ್ ಐ ಅಡಮಿಟ್ ಫಾರ್ ದಿ ಆಪರೇಷನ್!'

'ಇದು ಆಪರೇಷನ್‌ನಿಂದ ವಾಸಿಯಾಗುವಂತಹದಲ್ಲ. ನಿಮಗೆ ಹೆಚ್ಚೆಂದರೆ ಒಂದು ವಾರ ಉಳಿದಿರಬಹುದಷ್ಟೆ. ಸಾಧ್ಯವಾದಷ್ಟು ನಗುನಗುತ್ತಾ ಆ ಏಳು ದಿನಗಳೂ ಸಂತೋಷದಿಂದಿರಲು ನೋಡಿ!'

ಮನೆಗೆ ಬಂದ ನಂತರವೂ ಸದಾನಂದನಿಗೆ ತಲೆಬುಡ ಅರ್ಥವಾಗಲಿಲ್ಲ. ಮೂವತ್ತೆರಡು ವರುಷದಲ್ಲಿ ಒಮ್ಮೆ ಕೂಡಾ ಜೋರಾಗಿ ಕೆಮ್ಮಿ ತೊಂದರೆ ಕೊಟ್ಟಿದ್ದಾಗಲೀ, ಜ್ವರವೆಂದು ಮಾತ್ರೆ ನುಂಗಿ ಮಲಗಿದ್ದಾಗಲೀ ಅವನ ಅದುವರೆಗಿನ ಚಾರಿತ್ರ್ಯಾಪುಟದ ಚರಿತ್ರೆಯಲ್ಲಿ ದಾಖಲಾಗಿರಲಿಲ್ಲವಾದ್ದರಿಂದ ಈ ನಿಗೂಢ ಕಾಯಿಲೆ ಅವನಿಗೇ ಸೋಜಿಗವೆನ್ನಿಸಿತು. ಸದ್ಯದಲ್ಲೇ ಜರ್ಮನಿಗೆ ಹೊರಟಿದ್ದ ಅವನು ಕೆಲವು ಫಾರ್ಮಾಲಿಟೀಸ್‌ಗಾಗಿ ಡಾಕ್ಟರ್ ಹತ್ತಿರ ಬಂದಿದ್ದನು. ತಮಾಷೆಯೆಂದರೆ ಮಾರಣಾಂತಿಕ ಕಾಯಿಲೆ ಎಂದು ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟ ಕೂಡಲೇ, ಎಂದಿನಿಂದಲೂ ತಿಳಿದಿದ್ದ ವಿಷಯವೊಂದನ್ನು ತಾನೇ ಉದ್ದೇಶಪೂರ್ವಕವಾಗಿ ಮರೆತು, ಇದೀಗ ನಿಚ್ಚಳವಾಗಿ ಬಹಿರಂಗಗೊಂಡಂತಹ ವಿಚಿತ್ರ ಸಂದಿಗ್ಧ ಪರಿಸ್ಥಿತಿಯಲ್ಲಿ ನಿಂತು ಎಲ್ಲವನ್ನೂ ಕೇಳಿಸಿಕೊಂಡ ಅವನಿಗೆ, ತನಗೇನು ಕಾಯಿಲೆಯೆಂದು ಡಾಕ್ಟರ್‌ರನ್ನು ಆನಂತರವಾದರೂ ವಿಚಾರಿಸಬೇಕೆಂಬ ಸಣ್ಣ ಅಂಶವೂ ಹೊಳೆಯದೇ ಹೋಗಿದ್ದು. ಆ ಕ್ಷಣ ಅವನ ತಲೆಯೊಳಗೆ ಗಕ್ಕನೆ ಹೊಕ್ಕಿದ್ದು ಎರಡೇ ವಿಚಾರ: ಒಂದು, ಮಾರಣಾಂತಿಕ ಕಾಯಿಲೆ; ಎರಡು, ಉಳಿದಿರುವುದು ಇನ್ನು ಏಳು ದಿವಸಗಳ ಆಯಸ್ಸು!

ಮನೆಗೆ ವಾಪಸ್ಸಾಗುವಾಗ ದಾರಿಯಲ್ಲಿ ಬೈಕ್ ನಿಲ್ಲಿಸಿ, ಅಂಗಡಿಗೆ ನುಗ್ಗಿ, ಎಲ್ಲಾ ಸಂಖ್ಯೆಗಳನ್ನೂ ಕರಾರುವಾಕ್ಕಾಗಿ ಅಚ್ಚೊತ್ತಿಸಿಕೊಂಡಿದ್ದ ಸರಳ ಗಡಿಯಾರವೊಂದನ್ನು ಕೊಂಡು ತಂದಿದ್ದ. ಒಂದು ವರುಷದ ಹಿಂದೆಯೇ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಫ್ಲ್ಯಾಟನ್ನು ಕೊಂಡಿದ್ದನ್ನಾದರೂ, ಊರಲ್ಲಿರುವ ತಂದೆ ತಾಯಿಯರನ್ನು ಮನೆಗೆ ಕರೆ ತರುವ ಅವನ ಪ್ಲ್ಯಾನ್ ಅದ್ಯಾಕೋ ಮುಂದೆ ಹೋಗುತ್ತಲೇ ಇತ್ತು. ಒಂದು ಎಮ್.ಎನ್.ಸಿ.ಯಲ್ಲಿ ಕೆಲಸಕ್ಕೆ ಸೇರಿ ಕೆಲ ವರುಷಗಳೇ ಕಳೆದಿದ್ದರೂ ಇಬ್ಬರು ಅಕ್ಕ ತಂಗಿಯಂದಿರ ಮದುವೆ ಮತ್ತೊಂದೆಂದು